ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ವಿಶ್ವದ ನಂ.1 ಆಟಗಾರನ ಸೋಲಿಸಿ ಫೈನಲ್ ಪ್ರವೇಶಿಸಿದ ಶ್ರೀಕಾಂತ್

ಇಂಡೋನೇಷ್ಯಾ ಓಪನ್ ಸೂಪರ್ ಸೀರೀಸ್ ಪ್ರೀಮಿಯರ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ನಂ.1 ಆಟಗಾರ ಕಿಡಂಬಿ ಶ್ರೀಕಾಂತ್ ಅವರು ವಿಶ್ವದ ನಂ.1 ಆಟಗಾರ ಕೊರಿಯಾದ ಸನ್ ವ್ಯಾನ್ ಹೋ ಅವರ ವಿರುದ್ಧ ಶನಿವಾರ ಭರ್ಜರಿ ಗೆಲುವು ಸಾಧಿಸುವ ಮೂಲಕ ಫೈನಲ್ ಪ್ರವೇಶಿಸಿದ್ದಾರೆ. ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಜಪಾನಿನ ಕಝುಮಾಸ್ ಸಕಾಯಿ ಅವರನ್ನು ಎದುರಿಸಲಿದ್ದಾರೆ.

ರಾಷ್ಟ್ರಪತಿ ಚುನಾವಣೆಗೆ ಚಹಾ ಮಾರಾಟ ವ್ಯಕ್ತಿಯಿಂದ ನಾಮಪತ್ರ

ಚಹಾ ಮಾರಿದ ವ್ಯಕ್ತಿ ಪ್ರಧಾನಿಯಾಗಿರುವಾಗ ನಾನೇಕೆ ರಾಷ್ಟ್ರಪತಿ ಆಗಬಾರದು ಎನ್ನುವ ಭೋಪಾಲ್‌ನ ಸ್ಥಳೀಯ ಚಹಾ ಮಾರಾಟಗಾರ ರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದಾರೆ. ಗ್ವಾಲಿಯರ್‌ನ ಲಶ್ಕರ್ ನಿವಾಸಿ ಆನಂದ್ ಸಿಂಗ್ ಕುಶ್ವಾ ಅವರು ತಾರಗಂಜ್ ಪ್ರದೇಶದಲ್ಲಿ ಪುಟ್ಟ ಅಂಗಡಿಯಲ್ಲಿ ಚಹಾ ಮಾರಾಟ ನಡೆಸುತ್ತಿದ್ದಾರೆ. ಮಾಹಿತಿಯ ಪ್ರಕಾರ, ಕುಶ್ವಾ ಅವರು ದೆಹಲಿಗೆ ತೆರಳಿ ಸಂಸತ್‌ನಲ್ಲಿ ಮುಖ್ಯ ಚುನಾವಣಾ ಅಧಿಕಾರಿಯನ್ನು ಭೇಟಿ ಮಾಡಿ ನಾಮಪತ್ರವನ್ನು ಸಲ್ಲಿಸಿದ್ದಾರೆ.

‘ ಮುಯ್ಯಿಗೆ ಮುಯ್ಯಿ ತೀರಿಸಲು ಇದು ಮಹತ್ವದ

ಪಾಕಿಸ್ತಾನ ಕ್ರಿಕೆಟ್ ತಂಡದ ಮಾಜಿ ನಾಯಕ ಇಮ್ರಾನ್ ಖಾನ್ ಅವರು ಭಾರತ ವಿರುದ್ಧದ ಮೊದಲ ಪಂದ್ಯದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳಲು ಭಾನುವಾರ ನಡೆಯುವ ಫೈನಲ್ ಪಂದ್ಯ ಮಹತ್ವದ ಅವಕಾಶ ಎಂದು ಹೇಳಿದ್ದಾರೆ. ಜೂನ್ 4ರ ಪಂದ್ಯದಲ್ಲಿ ಭಾರತದ ವಿರುದ್ಧ ಪಾಕ್ ಸೋಲು ಕಂಡಿದ್ದು ಅವಮಾನಕರವಾಗಿತ್ತು. ನಾವು ನಮ್ಮ ತಂಡದ ಗೌರವ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಇದು ಮಹತ್ವದ ಅವಕಾಶ ಎಂದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :221 ಭಾನುವಾರ ಜೂ.18, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಪ್ರಭಾವನಾ ರಥಯಾತ್ರೆಗೆ ಚಾಲನೆ

ಶ್ರವಣಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕ ಮಹೋತ್ಸವ-2018ರ ನಿಮಿತ್ತ ಕಾರ್ಯಕ್ರಮ

ಶ್ರವಣಬೆಳಗೊಳ:ಭಗವಾನ್ ಬಾಹುಬಲಿ ಸ್ವಾಮಿಯ ಜೀವನ ಇತಿಹಾಸ ಹಾಗೂ ಅವರ ಸಂದೇಶವಾದ ಅಹಿಂಸೆಯಿಂದ ಸುಖ, ತ್ಯಾಗದಿಂದ ಶಾಂತಿ, ಮೈತ್ರಿಯಿಂದ ಪ್ರಗತಿ, ಧ್ಯಾನದಿಂದ ಸಿದ್ಧಿ ಈ ಸಂದೇಶವನ್ನು ರಾಜ್ಯದ ಎಲ್ಲಾ ನಗರ ಹಾಗೂ ಗ್ರಾಮಗಳಿಗೆ ತಲುಪಿಸುವುದೇ ಈ ಪ್ರಭಾವನಾ ರಥಯಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದು ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಚಾವುಂಡರಾಯ ಸಭಾ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಮಹಾ ಮಸ್ತಕಾಭಿಷೇಕ ಮಹೋತ್ಸವ-2018ರ ನಿಮಿತ್ತ ಪ್ರಭಾವನಾ ರಥಯಾತ್ರೆ, ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ನೆರವೇರಲಿರುವ ಮಹಾಮಸ್ತಕಾಭಿಷೇಕ ಮಹೋತ್ಸವದ ಪರಂಪರೆಯಂತೆ ಧರ್ಮ ಜಾಗೃತಿ, ನೈತಿಕ ಉತ್ಥಾನಕ್ಕಾಗಿ ಹಾಗೂ ಸಂಸ್ಕೃತಿಯ ಸಂರಕ್ಷಣೆಗಾಗಿ ಪ್ರಭಾವನಾ ರಥ ಪ್ರವರ್ತನೆ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಈ ರಥಯಾತ್ರೆಯು 2018ರ ಮಹಾ ಮಸ್ತಕಾಭಿಷೇಕ ಮಹೋತ್ಸವಕ್ಕೆ ಆಹ್ವಾನವೂ ಆಗಿದ್ದು, 2018ರ ಜನವರಿ ತಿಂಗಳಲ್ಲಿ ಶ್ರೀಕ್ಷೇತ್ರಕ್ಕೆ ವಾಪಸ್ ಬರಲಿದೆ

ರಥಯಾತ್ರೆ ಯಶಸ್ವಿಗೆ ಹಾರೈಕೆ

ಜಗತ್ತಿನ ಮನುಕುಲಕ್ಕೆ ಅಗತ್ಯವಾಗಿ ಬೇಕಾಗಿರುವುದು ಶಾಂತಿ. ಆ ದಿವ್ಯಶಾಂತಿ ಸಂದೇಶವನ್ನು ಸಾರುತ್ತಿರುವ ಈ ಪುಣ್ಯ ನೆಲದಿಂದ ಆರಂಭಗೊಂಡ ರಥ ಯಾತ್ರೆಯು ಯಶಸ್ವಿಯಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಶುಭ ಕೋರಿದರು.

ಪಟ್ಟಣದ ಚಾವುಂಡರಾಯ ಸಭಾ ಮಂಟಪ ದಲ್ಲಿ ಆಯೋಜಿಸಿದ್ದ ಪ್ರಭಾವನಾ ರಥಯಾತ್ರೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಹಾಗೂ ಅವರ ತಂಡ ಪ್ರತಿಯೊಂದು ಪ್ರಗತಿ ಕಾರ್ಯ ಮಾಡಲು ಪೂರ್ವ ಸಿದ್ಧತೆ ಸಂಪೂರ್ಣಗೊಂಡಿದ್ದು, ಇದೇ ತಿಂಗಳ 23ರಂದು ಇಲ್ಲಿನ ಚಿಕ್ಕದೇವರಾಜ ಒಡೆಯರ್ ಕಲ್ಯಾಣಿಯನ್ನು ಸ್ವಚ್ಛಗೊಳಿಸುವ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ರಾಷ್ಟ್ರೀಯ ಹೆದ್ದಾರಿ-75ರಲ್ಲಿರುವ ರಾಜಾಪುರದ ಬಳಿ ಹಳ್ಳಿ ಸೊಗಡಿನ ಮನೆ ನಿರ್ಮಿಸಲು ಮುಂದಾಗಿದ್ದು, ಈಗಾಗಲೇ ಸ್ಥಳ ಪರಿಶೀಲನೆ ನಡೆಸಲಾಗಿದೆ ಎಂದು ತಿಳಿಸಿದರು.

> “ಪ್ರಭಾವನಾ ರಥಯಾತ್ರೆಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಂಚರಿಸುವಾಗ ಭಜನೆ, ಕೀರ್ತನೆ, ಸಂಗೀತ, ಕಿರು ನಾಟಕ, ವಿದ್ವಾಂಸರಿಂದ ಧರ್ಮ ಪ್ರಭಾವನಾ ಪ್ರವಚನ, ಧಾರ್ಮಿಕ ಹಾಗೂ ಸಾಹಿತ್ಯ ಗ್ರಂಥಗಳ ಪ್ರದರ್ಶನ ಮತ್ತು ಮಾರಾಟದ ಜೊತೆಗೆ ಈ ಹಿಂದಿನ ಮಹಾಮಸ್ತಕಾಭಿಷೇಕ ಮಹೋತ್ಸವಗಳ ಕಿರು ವಿಡಿಯೋಗಳನ್ನು ಪ್ರದರ್ಶನ ಮಾಡಲಾಗುವುದು.
>
> -ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ,
> ಶ್ರವಣಬೆಳಗೊಳ ಶ್ರೀಕ್ಷೇತ್ರ.

> “ಈ ಬಾರಿಯ ಮಹಾ ಮಸ್ತಕಾಭಿಷೇಕದ ಸಂದರ್ಭದಲ್ಲಿ ಶಾಶ್ವತ ಯೋಜನೆಗಳನ್ನು ರೂಪಿಸಿದ್ದು, ಕುಡಿಯುವ ನೀರು, ಕುಡಿಯುವ ನೀರಿನ ಯೋಜನೆಯ ವಿಸ್ತರಣೆ, ಉನ್ನತ ಮಟ್ಟದ ಸಾರಿಗೆ ಬಸ್ ನಿಲ್ದಾಣ, ಒಳ ಚರಂಡಿ ವ್ಯವಸ್ಥೆ, ವಿದ್ಯುತ್ ವಿಸ್ತರಣಾ ಘಟಕದ ಉನ್ನತೀಕರಣ, ರಸ್ತೆಗಳ ವಿಸ್ತರಣೆ, ಶ್ರವಣಬೆಳಗೊಳಕ್ಕೆ ಸಂಪರ್ಕಿಸುವ ಎಲ್ಲಾ ರಸ್ತೆಗಳ ಅಭಿವೃದ್ಧಿ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.
>
> -ಎ.ಮಂಜು, [illegible] ಸಚಿವ

ಇಂದು ‘ಪ್ರೊ||ಕೆ.ರಾಮದಾಸ್ ನೆನಪಿನಲಿ....’ ಕುರಿತ ಸಂವಾದ

ಹಾಸನ : ವಿಚಾರವಾದಿ, ಪ್ರಗತಿಪರ ಚಿಂತಕ ‘ಪ್ರೊ||ಕೆ.ರಾಮದಾಸ್ ನೆನಪಿನಲಿ....’ ಕುರಿತ ಸಂವಾದ, ಪುಸ್ತಕ ಬಿಡುಗಡೆ, ಲೇಖಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮೈಸೂರಿನ ಕಲಾ ಮಂದಿರದ ಮನೆಯಂಗಳ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಭಾನುವಾರ ಬೆಳಿಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ, ಔಟ್‌ಲುಕ್‌ನ ಸಂಪಾದಕ ಕೃಷ್ಣಪ್ರಸಾದ್ ಉದ್ಘಾಟಿಸಲಿದ್ದಾರೆ. ಚಿಂತಕ ಬಿ.ಎನ್.ಶ್ರೀರಾಂ ಅಧ್ಯಕ್ಷತೆ ವಹಿಸಲಿದ್ದು, ಜನತಾ ಮಾಧ್ಯಮ ಸಂಪಾದಕ ಆರ್.ಪಿ.ವೆಂಕಟೇಶಮೂರ್ತಿ ಪುಸ್ತಕ ಬಿಡುಗಡೆ ಮಾಡಲಿದ್ದಾರೆ.

ಅಲೆಮಾರಿ ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ.ಎಸ್.ವಿಮಲ ಪ್ರಶಸ್ತಿ ಪ್ರದಾನ ಮಾಡಲಿದ್ದು, ಆಂದೋಲನ ಪತ್ರಿಕೆ ಸಂಪಾದಕ ರಾಜಶೇಖರ ಕೋಟಿ ಉಪಸ್ಥಿತಿ ವಹಿಸುವರು.

ಸಂವಾದ : ‘ಮತೀಯವಾದದ ನೆರಳಿನಲ್ಲಿ ಪ್ರಜ್ಞಾಭುತ್ವ-ಕಾರಣ, ಪರಿಣಾಮ ಮತ್ತು ಬಿಡುಗಡೆ’ ಎಂಬ ವಿಷಯ ಕುರಿತು ಸಂವಾದ ನಡೆಯಲಿದ್ದು, ಮೀನಾ ಮೈಸೂರು, ಲಕ್ಷ್ಮಣ ಹೊಸಕೋಟೆ, ಮಹೇಶ್ ಹರವೆ, ನಂದಾ ಹಳೇಮನೆ, ಟಿ.ಸತೀಶ್ , ಜವರೇಗೌಡ ಸಂವಾದದಲ್ಲಿ ಭಾಗವಹಿಸಲಿದ್ದಾರೆ.

ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ಹಾಸನ : 2017-18ನೇ ಸಾಲಿಗೆ ಮುಖ್ಯಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಅನುಷ್ಠಾನಗೊಳಿಸುವ ಕುರಿತು ಜಿಲ್ಲೆಯ ಅರ್ಹ ಗ್ರಾಮೀಣ ಅಭ್ಯರ್ಥಿಗಳು ಯೋಜನೆಯ ಸದವಕಾಶ ಪಡೆದುಕೊಂಡು ಸ್ವ-ಉದ್ಯೋಗಿಗಳಾಗಲು ಅವಕಾಶ ಕಲ್ಪಿಸಿಕೊಳ್ಳಲು ಅರ್ಜಿ ಸಲ್ಲಿಸಲು ಜೂ.12 ಕೊನೆಯ ದಿನಾಂಕ ಎಂದು ನಿಗದಿಪಡಿಸಲಾಗಿತ್ತು. ಆದರೆ ಜು.3ವರೆಗೆ ಇದನ್ನು ವಿಸ್ತರಿಸಲಾಗಿದ್ದು, ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ www.cmegp. kar. nic.in ಇಲ್ಲಿ ಅರ್ಜಿ ಸಲ್ಲಿಸಬಹುದು.

ಸರಗಳ್ಳತನ : 7 ಆರೋಪಿಗಳ ಬಂಧನ

- 11 ಪ್ರಕರಣಗಳಲ್ಲಿ 9 ಪ್ರಕರಣ ಪತ್ತೆ
- ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ವಶ
- 5 ಬೈಕ್‌ಗಳೂ ವಶ
- ಹೊರ ರಾಜ್ಯದ ತಂಡ ಭಾಗಿ ಶಂಕೆ
- ಶೀಘ್ರ ಬಂಧನ ವಿಶ್ವಾಸ
- ಅಪಘಾತ ತಡೆಗಟ್ಟಲು ಸಿಸಿ ಕ್ಯಾಮೆರಾ ಅಳವಡಿಕೆ

ಹಾಸನ : ನಗರದ ವಿವಿಧೆಡೆ ದ್ವಿಚಕ್ರ ವಾಹನದಲ್ಲಿ ಬಂದು ಮಹಿಳೆಯರ ಸರ ಕಳ್ಳತನ ಮಾಡುತ್ತಿದ್ದ ಏಳು ಆರೋಪಿಗಳನ್ನು ನಗರ ಠಾಣೆ ಪೊಲೀಸರು ಬಂಧಿಸಿ ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣ ವಶಪಡಿಸಿಕೊಂಡಿದ್ದಾರೆ.

ಒಂಟಿ ಮಹಿಳೆಯರ ಸರ ಕಳವು ಮಾಡಿ ಪರಾರಿಯಾಗಿದ್ದ ಮಾರುಕಟ್ಟೆ ಹತ್ತಿರದ ನಿವಾಸಿ ಮಹಮ್ಮದ್ ಮುದಸೀರ್, ಹಳೇ ಮಟನ್ ಮಾರುಕಟ್ಟೆ ಹತ್ತಿರದ ಮುದಸೀರ್ ಅಹಮ್ಮದ್, ಶಾಹಿ ಮಸೀದಿ ಹಿಂಭಾಗದ ಶಾಕಿಬ್, ಆದರ್ಶ ನಗರದ ಸುಹೇಬ್ ಖಾನ್, ಚಿಪ್ಪಿನಕಟ್ಟೆಯ ಫೈರೋಜ್, ಇಲಾಹಿ ನಗರದ ಶಾಹಿದ್ ಮತ್ತು ಪೆನ್ಷನ್ ಮೊಹಲ್ಲಾದ ಮಹಮ್ಮದ್ ಅಫ್ಜಲ್ ಅವರನ್ನು ಬಂಧಿಸಿ, 300 ಗ್ರಾಂ ತೂಕದ ರೂ.8.25 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಐದು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ವರ್ಷ ದಾಖಲಾಗಿದ್ದ 21 ಸರ ಕಳವು ಪ್ರಕರಣವನ್ನು ಭೇದಿಸಲಾಗಿದೆ. ಪ್ರಸಕ್ತ ವರ್ಷ 11 ಸರಗಳ್ಳತನ ಪ್ರಕರಣ ದಾಖಲಾಗಿದ್ದು, ಏಳು ಆರೋಪಿಗಳನ್ನು ಬಂಧಿಸುವ ಮೂಲಕ 9 ಪ್ರಕರಣ ಪತ್ತೆ ಮಾಡಲಾಗಿದೆ. ಉಳಿದ ಎರಡು ಪ್ರಕರಣಗಳಲ್ಲಿ ಹೊರ ರಾಜ್ಯದ ತಂಡದ ಕೈವಾಡವಿದ್ದು, ಶೀಘ್ರದಲ್ಲಿಯೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ವಿವರಿಸಿದರು.

ಹಣ್ಣಿನ ವ್ಯಾಪಾರ, ವೆಲ್ಡಿಂಗ್, ಚಿನ್ನ-ಬೆಳ್ಳಿ ಪಾಲಿಷ್ ಮತ್ತು ಗುಜರಿ ವ್ಯಾಪಾರ ಮಾಡಿಕೊಂಡಿರುವ ಆರೋಪಿಗಳು ಮೊದಲ ಬಾರಿಗೆ ಸರಗಳ್ಳತನ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ದಿನನಿತ್ಯದ ಖರ್ಚಿಗೆ ಹಣ ಹೊಂದಿಸಲು ಈ ರೀತಿ ಮಾಡಿದ್ದಾರೆ. ಇವರಲ್ಲಿ ಮಹಮ್ಮದ್ ಅಫ್ಜಲ್ ವಿರುದ್ಧ ವರ್ಷದ ಹಿಂದೆ ತಾಮ್ರ ಕಳವು ಪ್ರಕರಣ ದಾಖಲಾಗಿತ್ತು. ಶಾಕಿಬ್ ಮತ್ತು ಶಾಹಿದ್ ಅವರು, ಇತರರು ಕಳವು ಮಾಡಿ ತರುತ್ತಿದ್ದ ಆಭರಣಗಳನ್ನು ಕೊಂಡುಕೊಳ್ಳುತ್ತಿದ್ದರು. ಅಲ್ಲದೇ ಕಳ್ಳತನ ಮಾಡುವ ಪ್ರದೇಶ ತೋರಿಸುತ್ತಿದ್ದರು. ಕೆಲವು ಕೃತ್ಯ ನಡೆದಾಗ ಸ್ಥಳದಲ್ಲಿಯೂ ಇದ್ದರು ಎಂಬುದನ್ನು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ ಎಂದರು.

ಅಪಘಾತ ಹಾಗೂ ಅಪರಾಧ ಚಟುವಟಿಕೆಗೆ ಕಡಿವಾಣ ಹಾಕಲು ನಗರದ ಆಯ್ದ ಸ್ಥಳಗಳಲ್ಲಿ ಹೆಚ್ಚುವರಿಯಾಗಿ 14 ಹಾಗೂ ಸಕಲೇಶಪುರದಲ್ಲಿ 4 ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗುತ್ತಿದೆ. ವಾಹನಗಳ ನಂಬರ್ ಸೆರೆ ಹಿಡಿಯಲು ಆರು ಸಿಸಿ ಟಿವಿ ಕ್ಯಾಮೆರಾ ಹಾಕಲಾಗುತ್ತಿದೆ ಎಂದು ನುಡಿದರು.

ಹೊಳೆನರಸೀಪುರ ಯುವತಿ ಅಪಹರಣ ಪ್ರಕರಣದಲ್ಲಿ ಎಂಟು ಮಂದಿ ಭಾಗಿಯಾಗಿದ್ದು, ಮೋಹನ್ ಮತ್ತು ಆತನ ಸಹಚರರನ್ನು ಮಂಡ್ಯದಲ್ಲಿ ಬಂಧಿಸಲಾಗಿದೆ. ಉಳಿದವರನ್ನು ಶೀಘ್ರದಲ್ಲಿಯೇ ಬಂಧಿಸಲಾಗುವುದು. ಮೋಹನ್ ವಿರುದ್ಧ ದಾಖಲಾಗಿದ್ದ ಬಸನಹಳ್ಳಿ ಪ್ರಕರಣದ ವಿಚಾರಣೆಯನ್ನು ಮತ್ತೆ ಆರಂಭಿಸಲಾಗುವುದು ಎಂದು ಎಸ್ಪಿ ರಾಹುಲ್ ಹೇಳಿದರು.

ಈ ವೇಳೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜ್ಯೋತಿ ವೈದ್ಯನಾಥನ್, ಡಿಎಸ್‌ಪಿ ಎಂ.ಎನ್.ಶಶಿಧರ್, ಸಿಪಿಐ ಸತ್ಯನಾರಾಯಣ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸುರೇಶ್ ಇದ್ದರು.

‘ಲಾರ್ವಾ ಬೆಳೆಯದಂತೆ ಎಚ್ಚರ ವಹಿಸಿ ಡೆಂಗ್ಯೂ ನಿಯಂತ್ರಣಕ್ಕೆ ಸಹಕರಿಸಿ’



ಹಾಸನ : ಡೆಂಗ್ಯೂಗೆ ಕಾರಣವಾಗುವ ಸೊಳ್ಳೆಗಳ ನಿಯಂತ್ರಣಕ್ಕಾಗಿ ಮುಂಜಾಗ್ರತೆ ವಹಿಸಿ ಸೊಳ್ಳೆಗಳ ಉತ್ಪತ್ತಿ ಮಾಡುವ ಲಾರ್ವ ಬೆಳೆಯದಂತೆ ಎಚ್ಚರ ವಹಿಸುವ ಮೂಲಕ ಡೆಂಗ್ಯೂ ನಿಯಂತ್ರಣಕ್ಕೆ ಸಾರ್ವಜನಿಕರು ಸಹಕರಿಸುವಂತೆ ಶಾಸಕ ಹೆಚ್.ಎಸ್. ಪ್ರಕಾಶ್ ಮನವಿ ಮಾಡಿದರು.

ನಗರಸಭೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಜೂನ್ 17ರಿಂದ 20ರವರೆಗೂ ನಗರದಾದ್ಯಂತ ಡೆಂಗ್ಯೂ ನಿಯಂತ್ರಣ ಸಲುವಾಗಿ ಸಾಮೂಹಿಕ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆಗಾಗಿ ಹಮ್ಮಿಕೊಳ್ಳಲಾಗಿರುವ ಲಾರ್ವಾ ನಾಶ ಅಭಿಯಾನದಲ್ಲಿ ಶಾಸಕರು ಅಂಬೇಡ್ಕರ್ ನಗರದಲ್ಲಿ ಶನಿವಾರ ಪಾಲ್ಗೊಂಡು ಪರಿಶೀಲಿಸಿ ಮಾತನಾಡಿದರು. ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡುವುದರ ಜೊತೆಗೆ ಹಳೆಯ ಟೈರು, ತೆಂಗಿನ ಕೊರಟ ಮತ್ತಿತರ ಬೇಡದ ಪದಾರ್ಥಗಳಲ್ಲಿ ನೀರು ನಿಲ್ಲದಂತೆ ನಿಗಾ ವಹಿಸುವಂತೆ ತಿಳಿಸಿದರು.

ಈ ಅಭಿಯಾನದಲ್ಲಿ ಲಾರ್ವಾ ಸರ್ವೆಗೆ ನಗರಸಭೆ ವತಿಯಿಂದ 4,22,000 ರೂ.ಗಳ ಅನುದಾನವನ್ನು ಆರೋಗ್ಯ ಇಲಾಖೆಗೆ ಬಿಡುಗಡೆ ಮಾಡಲಾಗಿದ್ದು , ಸರ್ಕಾರಿ ನರ್ಸಿಂಗ್ ಕಾಲೇಜು, ಎನ್.ಡಿ.ಆರ್. ಕೆ. ಹಾಗೂ ಎ.ಎನ್.ಎಂ ತರಬೇತಿ ಸಂಸ್ಥೆಯ ವಿದ್ಯಾರ್ಥಿಗಳ ಮುಖಾಂತರ ನಗರದಾದ್ಯಂತ ಲಾರ್ವಲ್ ಸರ್ವೆ ನಡೆಸಲಾಗುತ್ತಿದೆ ಎಂದು ನಗರಸಭೆ ಅಧ್ಯಕ್ಷ ಹೆಚ್.ಎಸ್.ಅನಿಲ್ ಕುಮಾರ್ ತಿಳಿಸಿದರು.

(-4ನೇ ಪುಟಕ್ಕೆ)

ಇದು ಭಾರತ-ಪಾಕ್ ನಡುವಿನ ಯುದ್ಧವಲ್ಲ

ಹಾಸನ : ಭಾರತ ಮತ್ತು ಪಾಕಿಸ್ತಾನದ ನಡುವಿನ ಕ್ರಿಕೆಟ್‌ನ್ನು ಯುದ್ಧೋನ್ಮಾದದ ರೀತಿಯಲ್ಲಿ ಮಾಧ್ಯಮಗಳು ಅತಿಯಾಗಿ ರಂಜಿಸುತ್ತಿವೆ. ಇದು ಅತ್ಯಂತ ಖೇದಕರ ಸಂಗತಿ.

ಭಾನುವಾರ ಭಾರತವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಐ.ಸಿ.ಸಿ. ಚಾಂಪಿಯನ್ ಟ್ರೋಫಿಗಾಗಿ ಎರಡು ತಂಡಗಳು ಸೆಣಸಲಿವೆ. ಇದು ಭಾರತ ಮತ್ತು ಪಾಕಿಸ್ತಾನದ ನಡುವಿನ ಕ್ರಿಕೆಟ್ ಆಟವೇ ಹೊರತು ಯುದ್ಧವಲ್ಲ.

ದೃಶ್ಯಮಾಧ್ಯಮಗಳಲ್ಲಿ ಈ ಕ್ರೀಡಾ ಹಬ್ಬವನ್ನು ಅತಿಯಾಗಿ ರಂಜಿಸಲಾಗುತ್ತಿದೆ. ಒಂದರ್ಥದಲ್ಲಿ ಯುದ್ಧೋನ್ಮಾದದಂತೆ ಭಾವಿಸಿಕೊಂಡಿರುವಂತಿದೆ. ನಿಜವಾಗಿಯೂ ಈ ವಿಚಾರದಲ್ಲಿ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು. ದ್ವೇಷ, ಅಸೂಯೆ ಒಳ್ಳೆಯ ಬೆಳವಣಿಗೆ ಅಲ್ಲ.

ಕ್ರೀಡೆಯು ದ್ವೇಷ ಮತ್ತು ಅಸೂಯೆಯನ್ನು ತಗ್ಗಿಸುತ್ತದೆ. ಮನುಷ್ಯ ಸಂಬಂಧಗಳನ್ನು ವೃದ್ಧಿಸುತ್ತದೆ. ಕ್ರೀಡೆಗೆ ಅಂತಹದೊಂದು ದೊಡ್ಡ ಶಕ್ತಿ ಇದೆ. ಹಾಗೆ ನೋಡಿದರೆ ಕಲೆ ಮತ್ತು ಕ್ರೀಡೆ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುತ್ತವೆ.

ಆದರೆ ಕ್ರಿಕೆಟ್ ಹೆಸರಿನಲ್ಲಿ ಈಗ ಆಗುತ್ತಿರುವ ಬೆಳವಣಿಗೆ ನಾಗರಿಕ ಸಮಾಜ ತಲೆ ತಗ್ಗಿಸುವಂತಹದು. ಈಗಾಗಲೇ ಭಾರತ ಮತ್ತು ಪಾಕಿಸ್ತಾನದ ನಡುವೆ ರಾಜತಾಂತ್ರಿಕ ಸಂಬಂಧ ಸಂಪೂರ್ಣ ಹದಗೆಟ್ಟು ಹೋಗಿದೆ. ಯುದ್ಧದ ವಾತಾವರಣ ನಿರ್ಮಾಣವಾಗಿದೆ ಎಂದು ಬಿಡಿಸಿ ಹೇಳಬೇಕಿಲ್ಲ. ಗಡಿಯಲ್ಲಿ ಗುಂಡಿನ ಮೊರೆತ ಕೇಳಿ ಬರುತ್ತಲೇ ಇದೆ ಅಲ್ಲವೇ?

ಐಪಿಎಲ್ ಕ್ರಿಕೆಟ್‌ಗೆ ಪಾಕಿಸ್ತಾನವನ್ನು ಬಹಿಷ್ಕರಿಸಲಾಯಿತು. ಪಾಕ್ ತಂಡ ಕೂಡ ಭಾರತದಲ್ಲಿ ಐಪಿಎಲ್ ಕ್ರಿಕೆಟ್ ಆಡಲಿಲ್ಲ. ಆ ದೇಶದ ನಡುವಿನ ಸಂಬಂಧ ಹದಗೆಡುತ್ತಲೇ ಹೋಗಿದೆ. ಇದಕ್ಕೆ ಇನ್ನಷ್ಟು ಬೆಂಕಿ ಹಚ್ಚುವ ಕೆಲಸ ಯಾರೂ ಮಾಡಕೂಡದು.

ಕ್ರಿಕೆಟ್‌ನಲ್ಲಿ ಸೋಲು-ಗೆಲುವು ಇದ್ದದ್ದೇ. ಕ್ರೀಡಾ ಮನೋಭಾವವನ್ನು ಸ್ವೀಕರಿಸಬೇಕು. ಯಾವಾಗಲೂ ಒಂದೇ ತಂಡ ಗೆಲ್ಲುತ್ತಿದ್ದರೆ ಅದನ್ನು ಕ್ರೀಡೆ ಎಂದು ಕರೆಯಲು ಸಾಧ್ಯವಿಲ್ಲ. ಗೆಲುವು ಮತ್ತು ಸೋಲು ಸಮಾನವಾಗಿರಬೇಕು. ಒಂದೇ ತಂಡ ಸೋತು ಟೀಕೆಗೊಳಗಾಗುವುದು ಅಥವಾ ಇನ್ನೊಂದು ತಂಡ ಯಾವಾಗಲೂ ಗೆದ್ದು ಬೀಗುವುದು ಹೆಮ್ಮೆಪಡುವ ವಿಷಯವಲ್ಲ. ಆನಂದ ಕೂಡ ಸಿಗುವುದಿಲ್ಲ.

ಭಾರತ ಗೆದ್ದರೆ ಉದ್ರೇಕಗೊಳ್ಳುವುದು ಎಷ್ಟು ಸರಿ? ದ್ವೇಷ, ಅಸೂಯೆ ಮತ್ತೆಷ್ಟು ಸರಿ? ಭಾರತದ ವಿರುದ್ಧ ಇಂಗ್ಲೆಂಡ್ ಅಥವಾ ಆಸ್ಟ್ರೇಲಿಯಾದಂತಹ ಪ್ರಬಲ ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದರೆ ಪಂದ್ಯ ಆಕರ್ಷಕವಾಗಿರುತ್ತಿತ್ತು. ಕುತೂಹಲ ಕೂಡ ಉಳಿಯುತ್ತಿತ್ತು. ಸದ್ಯದ ಮಟ್ಟಿಗೆ ಹೇಳುವುದಾದರೆ, ಪಾಕ್ ತಂಡ ಪ್ರಬಲವಾಗಿಲ್ಲ.

ಯಾವುದೇ ಒಂದು ತಂಡ ಸತತವಾಗಿ ಸೋಲುತ್ತಿದ್ದರೆ ದುಃಖ ಜಾಸ್ತಿಯಾಗುತ್ತದೆ. ಮಾಧ್ಯಮಗಳಿಗೆ ಈ ಜವಾಬ್ದಾರಿ ಇರಬೇಕು. ಜವಾಬ್ದಾರಿ ಇಲ್ಲದವರು ಅನಗತ್ಯ ವಿಮರ್ಶೆ, ವಿಶ್ಲೇಷಣೆ ಮಾಡಿ ಚರ್ಚೆ ನಡೆಸುತ್ತಿದ್ದಾರೆ. ಭಾರತ-ಪಾಕ್ ನಡುವಿನ ಸಂಬಂಧ ಸುಧಾರಿಸಲು ಪ್ರಯತ್ನ ನಡೆಸಬೇಕಾದ ಮಾಧ್ಯಮಗಳೇ ಜವಾಬ್ದಾರಿ ಮರೆತಿವೆ ಅಲ್ಲವೇ?

ಡಾ||ಎ.ಸಿ.ಮುನಿವೆಂಕಟೇಗೌಡ

ನನಗೆ ಗೊತ್ತಿರುವಂತೆ ಕುಲದೀಪ್ ನಾಯರ್ ಈ ದೇಶ ಕಂಡ ಉತ್ತಮ ಪತ್ರಕರ್ತ. ಅವರು ಕೆಲವು ಆದರ್ಶಗಳನ್ನು ಇಟ್ಟುಕೊಂಡಿದ್ದರು. ಭಾರತ ಮತ್ತು ಪಾಕ್ ನಡುವಿನ ಸಂಬಂಧ ಸುಧಾರಿಸಲು ಕೆಲಸ ಮಾಡಿದ್ದರು. ಒಂದು ರೀತಿ ರಾಯಭಾರಿಯಾಗಿಯೂ ಕೆಲಸ ಮಾಡಿದ್ದರು ಎಂದು ಹೇಳಲೇಬೇಕು. ಅವರು ಪತ್ರಿಕೆಗಳಲ್ಲಿ ಬರೆಯುತ್ತಿದ್ದ ಲೇಖನಗಳು ಸಂಬಂಧ ಸುಧಾರಣೆಗೆ ಪೂರಕವಾಗಿರುತ್ತಿದ್ದವು.

ಸರ್ವೇ ಜನಃ ಸುಖಿನೋ ಭವಂತು ಎಂಬ ಮಾತು ಮತ್ತೆ ಮತ್ತೆ ನೆನಪಾಗುತ್ತಿದೆ. ಭಾರತದ ತತ್ವಜ್ಞಾನ ನಿಂತಿರುವುದು ಇದರ ಆಧಾರದ ಮೇಲೆಯೇ. ನಮ್ಮ ವಚನಕಾರರು ಸಕಲ ಜೀವಿಗಳಿಗೆ ಲೇಸನ್ನೇ ಬಯಸಿದ್ದರು. ನಮ್ಮ ನೆರೆಹೊರೆಯ ಜನ, ಜಿಲ್ಲೆ, ರಾಜ್ಯ, ರಾಷ್ಟ್ರದವರು ಚೆನ್ನಾಗಿದ್ದರೆ ನಮಗೂ ಕೂಡ ನೆಮ್ಮದಿ ಅಲ್ಲವೇ? ಅದನ್ನೇಕೆ ನಾವು ಮರೆತಿದ್ದೇವೆ?

ಭಾರತದಲ್ಲಿ ಬುದ್ಧ ಕೂಡ ಇದೇ ತತ್ವವನ್ನು ಹೇಳಿದ್ದರು. ಆದರೆ ಆ ಬಗ್ಗೆ ನಾವು ಆಲೋಚಿಸುವುದಿಲ್ಲ. ಸಕಲ ಜೀವಿಗಳಿಗೂ ಲೇಸನ್ನೇ ಬಯಸಬೇಕು. ವಿಶ್ವದಲ್ಲಿ ಶಾಂತಿ ನೆಲೆಸಬೇಕು. ಕ್ರಿಕೆಟ್‌ನಂತಹ ಸಜ್ಜನರ ಆಟದಲ್ಲಿ ನೆಮ್ಮದಿ, ಭ್ರಾತೃತ್ವ, ವಿಶ್ವಾಸ, ಶಾಂತಿ ಗಳಿಸಿಕೊಳ್ಳಬೇಕು. ಇದು ಸಭ್ಯರ ಕ್ರೀಡೆ. ಹಾಗಾಗಿ ಇನ್ನಾದರೂ ನಮ್ಮ ಮಾಧ್ಯಮದವರು ಈ [illegible]

ನಗರದಲ್ಲಿ ಮಲೆನಾಡು ಅಂತರರಾಷ್ಟ್ರೀಯ ಮಕ್ಕಳ ಶಾಲೆ

ಹಾಸನ : ವಿದ್ಯಾ ಕ್ಷೇತ್ರದಲ್ಲಿ ಆಗುತ್ತಿರುವ ವೇಗದ ಬೆಳವಣಿಗೆ ಮತ್ತು ಆವಿಷ್ಕಾರಗಳನ್ನು ಗಮನದಲ್ಲಿಟ್ಟುಕೊಂಡು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಮಲೆನಾಡು ಅಂತರರಾಷ್ಟ್ರೀಯ ಶಾಲೆಯೊಂದನ್ನು ನಗರದ ಎಂ.ಸಿ.ಇ. ಆವರಣದ ಪಕ್ಕದ ಎಂ.ಜಿ.ರಸ್ತೆಯಲ್ಲಿ ಆರಂಭಿಸಲಾಗಿದೆ ಎಂದು ತಾಂತ್ರಿಕ ಶಿಕ್ಷಣ ಸಂಸ್ಥೆಯ ಬಿ.ಆರ್.ಗುರುದೇವ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಈ ಶಾಲೆಯು ಕಿಂಡರ್ ಗಾರ್ಡನ್‌ನಿಂದ ಎರಡನೇ ತರಗತಿವರೆಗಿನ ಶಿಕ್ಷಣವನ್ನು ಪ್ರಾರಂಭಿಕವಾಗಿ ನೀಡಲು ಉದ್ದೇಶಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಶಾಲೆಯಲ್ಲಿ ವಿಶಾಲವಾದ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್, ಪ್ರಯೋಗ ಶಾಲೆ, ಆಟದ ಮೈದಾನ, ಈಜುಕೊಳದ ವ್ಯವಸ್ಥೆ ಇರುತ್ತದೆ. ದೈಹಿಕ ಶಿಕ್ಷಣ, ದಿವ್ಯ ಚೈತನ್ಯದಲ್ಲಿ ಯೋಗ ಹಾಗೂ ಧ್ಯಾನದ ಸೌಲಭ್ಯವನ್ನು ಈ ಶಾಲೆ ಹೊಂದಿದೆ ಎಂದರು.

ಸ್ವ ಶಿಕ್ಷಣವೇ ಪ್ರತಿಯೊಂದು ಮಗುವಿನ ಕಲಿಕೆಯ ಗುರಿಯಾಗಬೇಕು ಎಂಬುದು ಶಾಲೆಯ ಉದ್ದೇಶವಾಗಿದೆ. ಶಾಲೆಯಲ್ಲಿ ಹಿರಿಯ ತಾಂತ್ರಿಕಜ್ಞ, ಶಿಕ್ಷಣ ತಜ್ಞರು, ಅಶೋಕ ಫೆಲೊ ವಿಜೇತರು ಆದ ಉಮೇಶ್ ಮಲ್ಹೋತ್ರ ಮಕ್ಕಳಿಗೆ ಬೋಧನೆ ಮಾಡಲಿದ್ದಾರೆ. ವೈಜ್ಞಾನಿಕ ದೃಷ್ಠಿಕೋನದಲ್ಲಿ ಭಾರತೀಯತ್ವ ಮತ್ತು ಸಂಸ್ಕೃತಿಯನ್ನು ಪ್ರತಿ ಮಕ್ಕಳಿಗೆ ನೀಡಲಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಖಜಾಂಚಿ ಆರ್. ಶೇಷಗಿರಿ, ಕಾರ್ಯದರ್ಶಿ ಆರ್.ಟಿ. ದ್ಯಾವೇಗೌಡ, ಉಪಾಧ್ಯಕ್ಷ ಪುಟ್ಟರಾಜು, ನಿರ್ದೇಶಕ ಶಿವಣ್ಣ ಇತರರು ಇದ್ದರು.

ಇಂದು ‘ಯೋಗ ನಡಿಗೆ’

ಹಾಸನ : ಜೂ.21ರಂದು ನಡೆಯುವ ವಿಶ್ವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜೂನ್ 18ರಂದು ಭಾನುವಾರ ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿಯಿಂದ ಯೋಗ ನಡಿಗೆ (ಯೋಗಥಾನ್) ಹಮ್ಮಿಕೊಳ್ಳಲಾಗಿದೆ.

ಇದರಲ್ಲಿ ಸಾರ್ವಜನಿಕರು, ಶಾಲಾ ಕಾಲೇಜು ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ಯೋಗ ಶಿಬಿರಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಯೋಗ ನಡಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಸಮಾರೋಪಗೊಳ್ಳಲಿದೆ.

ಜೂನ್ 21ರಂದು ಬುಧವಾರ 3ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಈಗಾಗಲೇ ಎಲ್ಲಾ ಪೂರ್ವ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಸರ್ಕಾರ/ಸರ್ಕಾರೇತರ ಸಂಸ್ಥೆಗಳೊಂದಿಗೆ ಪೂರ್ವಭಾವಿ ಸಭೆಗಳನ್ನು ನಡೆಸಿ, ಕಾರ್ಯಕ್ರಮದ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ.

ಜೂನ್ 21ರ ಬುಧವಾರ ಬೆಳಿಗ್ಗೆ 7 ಗಂಟೆಗೆ ಸರಿಯಾಗಿ ಯೋಗ ದಿನಾಚರಣೆ ಕಾರ್ಯಕ್ರಮವು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರಾರಂಭಗೊಳ್ಳಲಿದೆ.

ಪಶು ಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಹೆಚ್.ಎಸ್.ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವ ಜನಿಕರು, ವಿದ್ಯಾರ್ಥಿ /ವಿದ್ಯಾರ್ಥಿನಿ ಯರು, ಎನ್.ಸಿ.ಸಿ ಕೆಡೆಟ್ಸ್ , ಯೋಗ ಬಂಧು, ಸರ್ಕಾರಿ, ಸರ್ಕಾರೇತರ ನೌಕರರು 45 ನಿಮಿಷಗಳ ಯೋಗ ಪ್ರದರ್ಶನದಲ್ಲಿ ಭಾಗವಹಿಸಲಿದ್ದಾರೆ.

ಈ ಬಾರಿ ಬ್ರಹ್ಮಕುಮಾರಿ ಸಂಸ್ಥೆಯವರಿಂದ 5 ನಿಮಿಷ ಯೋಗಾಧ್ಯಾನಕ್ಕೆ ಅವಕಾಶ ನೀಡಲಾಗಿದೆ. ತದನಂತರ ಸಭಾ ಕಾರ್ಯಕ್ರಮ ಜರುಗಲಿದೆ.

ಈ ಕಾರ್ಯಕ್ರಮದಲ್ಲಿ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

ಶ್ರೀ ಹಾಸನಾಂಬ ಗ್ಯಾಸ್ಟ್ರೋಎಂಟರಾಲಜಿ ಸೆಂಟರ್
ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
ಶಂಕರಮಠ ರಸ್ತೆ, ಕೆ.ಆರ್.ಪುರಂ, ಹಾಸನ - 573201.
ಪ್ರಾರಂಭೋತ್ಸವ
18-06-2017ನೇ ಭಾನುವಾರ, ಬೆಳಿಗ್ಗೆ 10.30ಕ್ಕೆ, ಆಸ್ಪತ್ರೆ ಆವರಣದಲ್ಲಿ
ಖ್ಯಾತ ಮಕ್ಕಳ ತಜ್ಞ ದಿವಂಗತ ಡಾ|| ಶ್ರೀ ದಿನೇಶ್ ಎಸ್. ಆರ್ ಸ್ಮರಣಾರ್ಥ
ಉದ್ಘಾಟನೆ : ಡಾ|| ಕೆ.ವಿ. ಅಶೋಕ್ ಕುಮಾರ್ [illegible]
ಅಧ್ಯಕ್ಷತೆ : ಡಾ|| ನಾಗೇಶ್ ಎಸ್. ಎಸ್. [illegible]
ಮುಖ್ಯ ಅತಿಥಿಗಳು : ಡಾ|| ಭೀಮಶಂಕರ ಎಸ್. ಗುಳೇದ, [illegible]
ಶ್ರೀ ರಾಹುಲ್ ಕುಮಾರ್ ಶಹಪುರ್‌ವಾಡ್, [illegible]
ಅತಿಥಿಗಳು : ಡಾ|| ಗುರುರಾಜ್ ಹೆಬ್ಬಾರ್, [illegible]
ಡಾ|| ದೊಡ್ಡೇಗೌಡರು, [illegible]
ಡಾ|| ವೆಂಕಟೇಶ್, [illegible]
ಡಾ|| ಮಂಜುನಾಥ್ ವಿ. ಎಸ್. [illegible]
[illegible]
ಆದರದ ಸ್ವಾಗತ ಕೋರುವ, ಡಾ|| ಬಸವರಾಜ ಜಿ. ಎನ್.
M.B.B.S, M.S, FSGE, FICS, FIAGES
[illegible]

ಇಂದು ಪ್ರಾರಂಭೋತ್ಸವ
ಡಾ|| ಬಸವರಾಜ ಜಿ.ಎನ್.
M.B.B.S, M.S, FSGE, FICS, FIAGES
ಡೈರೆಕ್ಟರ್, ಸರ್ಜಿಕಲ್ ಗ್ಯಾಸ್ಟ್ರೊ ಎಂಟರಾಲಜಿಸ್ಟ್ ಮತ್ತು ಹೆಪಟೋಬಿಲಿಯರಿ ಸರ್ಜನ್.
ಇವರು ಪ್ರಾರಂಭಿಸುತ್ತಿರುವ
ಶ್ರೀ ಹಾಸನಾಂಬ ಗ್ಯಾಸ್ಟ್ರೋಎಂಟರಾಲಜಿ ಸೆಂಟರ್
ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
ಶಂಕರಮಠ ರಸ್ತೆ, ಕೆ.ಆರ್.ಪುರಂ, ಹಾಸನ.
ಶುಭ ಕೋರುವವರು
ಹೆಚ್.ವಿ.ಯೋಗಾನಂದ, ರವಿ ಮೆಡಿಕಲ್ಸ್, ಹಾಸನ
ಎಸ್.ಎಸ್.ಜಯಲಕ್ಷ್ಮೀ ಯೋಗಾನಂದ
ಮತ್ತು ಡಿ.ವಿ.ಸುದರ್ಶನ್
ಶ್ರೀ ಹಾಸನಾಂಬ ಮೆಡಿಕಲ್ಸ್, ಹಾಸನ